

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 26-04-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಉಸ್ಮಾನ್ ಬಿನ್ ಮಝ್‌ಊನ್(ರ) ಬಗ್ಗೆ ವಿವರಿಸುತ್ತಾ ಅವರು ಜನ್ನತುಲ್ ಬಖೀಅ್ ಖಬರಸ್ಥಾನದಲ್ಲಿ ದಫನು ಮಾಡಲ್ಪಟ್ಟ ಪ್ರಥಮ ವ್ಯಕ್ತಿ ಎಂದು ನಾನು ಹೇಳಿದ್ದೆ. ಜನ್ನತುಲ್ ಬಖೀಅ್ ಖಬರಸ್ಥಾನದ ಪ್ರಾರಂಭದ ಬಗ್ಗೆ ಲಭಿಸಿದ ಮಾಹಿತಿಗಳು ಹೀಗಿವೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಆಗಮಿಸಿದ ಕಾಲದಲ್ಲಿ ಅಲ್ಲಿ ಅನೇಕ ಖಬರಸ್ಥಾನಗಳು ಇದ್ದುವು. ಯಹೂದಿಯರಿಗೆ ಬೇರೆಯೇ ಖಬರಸ್ಥಾನವಿತ್ತು. ಅರಬಿಗಳ ವಿವಿಧ ಗೋತ್ರಗಳಿಗೆ ತಮ್ಮದೇ ಆದ ವಿವಿಧ ಖಬರಸ್ಥಾನಗಳಿದ್ದುವು. ಮದೀನ ಆಗ ವಿವಿಧ ಬಡಾವಣೆಗಳನ್ನು ಹೊಂದಿರುವುದರಿಂದ ಪ್ರತಿಯೊಂದು ಗೋತ್ರ ತಾನಿದ್ದ ಪ್ರದೇಶದ ಬರಿದಾದ ಸ್ಥಳಗಳಲ್ಲಿ ತಮ್ಮ ಗೋತ್ರದ ಮೃತರನ್ನು ದಫನು ಮಾಡುತ್ತಿದ್ದುವು. ಖುಬಾದಲ್ಲಿದ್ದ ಒಂದು ಖಬರಸ್ಥಾನ ಹೆಚ್ಚು ಪ್ರಸಿದ್ಧವಾಗಿತ್ತು. ಅಲ್ಲಿ ಚಿಕ್ಕಪುಟ್ಟ ಬೇರೆ ಖಬರಸ್ಥಾನಗಳೂ ಇದ್ದುವು. ಬನೂ ಝುಫರ್ ಗೋತ್ರಕ್ಕೆ ಪ್ರತ್ಯೇಕ ಖಬರಸ್ಥಾನವಿತ್ತು. ಬನೂ ಸಲಿಮ ಗೋತ್ರಕ್ಕೆ ಬೇರೆ ಖಬರಸ್ಥಾನವಿತ್ತು. ಬನೂ ಸಅದ ಗೋತ್ರದವರಿಗೆ ಒಂದು ಖಬರಸ್ಥಾನವಿತ್ತು. ಅನಂತರ ಅಲ್ಲಿ ಸೂಖುನ್ನಬಿ (ಪ್ರವಾದಿಯ ಮಾರುಕಟ್ಟೆ) ಸ್ಥಾಪಿತವಾಯಿತು. ಮಸ್‌ಜಿದುನ್ನಬವೀ ನಿರ್ಮಿಸಲ್ಪಟ್ಟ ಸ್ಥಳದಲ್ಲಿ ಸಹ ಖರ್ಜೂರದ ಹೆಚ್ಚು ಮರಗಳಿರುವಲ್ಲಿ ಕೆಲವು ಬಹುದೇವಾರಾಧಕರ ಗೋರಿಗಳಿದ್ದುವು. ಈ ಎಲ್ಲಾ ಖಬರಸ್ಥಾನಗಳಲ್ಲಿ ಬಖೀಉಲ್ ಗರ್‌ಖದ್ ಎಂಬ ಖಬರಸ್ಥಾನ ಅತ್ಯಂತ ಹಳೆಯ ಪ್ರಸಿದ್ಧ ಖಬರಸ್ಥಾನವಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಖಬರಸ್ಥಾನವನ್ನು ಮುಸ್ಲಿಮರಿಗೆ ಖಬರಸ್ಥಾನವಾಗಿ ಆಯ್ಕೆ ಮಾಡಿದರು. ಅನಂತರ ಇಂದಿನ ತನಕ ಅದಕ್ಕೆ ಒಂದು ವಿಶಿಷ್ಟ ಸ್ಥಾನ ಲಭಿಸಿದೆ ಮತ್ತು ಯಾವಾಗಲೂ ಅದಕ್ಕೆ ಆ ಸ್ಥಾನ ಇರಲಿದೆ.

ಹಝ್ರತ್ ಉಬೈದುಲ್ಲಾ ಬಿನ್ ಅಬೀ ರಾಫಿಅ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರನ್ನು ಮಾತ್ರ ದಫನಗೊಳಿಸಲು ಒಂದು ಸ್ಥಳಕ್ಕೋಸ್ಕರ ಅನ್ವೇಷಿಸುತ್ತಿದ್ದರು. ಅವರು ಅದಕ್ಕೋಸ್ಕರ ವಿವಿಧ ಸ್ಥಳಗಳನ್ನು ನೋಡಿದರು. ಆದರೆ ಅಂತಹ ಖಬರಸ್ಥಾನವಾಗುವ ಅಭಿಮಾನ ಬಖೀಉಲ್ ಗರ್‌ಖದ್‌ಗೆ ವಿಧಿಸಲ್ಪಟ್ಟಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಈ ಸ್ಥಳವನ್ನು ಆಯ್ಕೆ ಮಾಡಲು ನನಗೆ ಆಜ್ಞೆ ದೊರೆತಿದೆ. ಆ ಖಬರಸ್ಥಾನದಲ್ಲಿ ಮೊತ್ತಮೊದಲು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನರ ಮಯ್ಯತನ್ನು ದಫನ್ ಮಾಡಲಾಯಿತು. ಗೋರಿಯಲ್ಲಿ ಮೃತರ ತಲೆಯಿರುವ ಭಾಗದಲ್ಲಿ ಒಂದು ಕಲ್ಲನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಗುರುತಿಗಾಗಿ ಇರಿಸಿದರು. ಅವರು ಹೇಳಿದರು: ಮೃತರು ನಮ್ಮ ಮುಂದೆ ಸಾಗಿದವರಾಗಿದ್ದಾರೆ. ಅನಂತರ ಯಾರಾದರೂ ಮೃತರಾದರೆ ಎಲ್ಲಿ ದಫನ್ ಮಾಡಬೇಕು ಎಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಕೇಳಿದಾಗ ಅವರು ಹೇಳುತ್ತಿದ್ದರು, ನಮಗಿಂತ ಮುಂದೆ ಸಾಗಿದ ಉಸ್ಮಾನ್ ಬಿನ್ ಮಝ್‌ಊನರ ಗೋರಿಯ ಸಮೀಪ ದಫನ್ ಮಾಡಿರಿ. ಬಖೀಅ್ ಎಂದರೆ ಅರಬಿ ಭಾಷೆಯಲ್ಲಿ ಬಹಳ ಮರಗಳಿರುವ ಪ್ರದೇಶ ಎಂದು ಅರ್ಥ. ಮದೀನದ ಆ ಸ್ಥಳವನ್ನು ಬಖೀಉಲ್ ಗರ್‌ಖದ್ ಎಂಬ ಹೆಸರಿನಲ್ಲಿ ಕರೆಯುತ್ತಿದ್ದರು. ಏಕೆಂದರೆ ಅಲ್ಲಿ ಗರ್‌ಖದ್ ಮರಗಳು ತುಂಬಾ ಇದ್ದುವು. ಅಲ್ಲಿ ಮರುಭೂಮಿಯ ಗಿಡ್ಡ ಮರಗಳೂ ಬಹಳ ಇದ್ದುವು. ಆ ಸ್ಥಳ ಅನಂತರ ಜನ್ನತುಲ್ ಬಖೀಅ್ ಎಂದು ಕರೆಯಲ್ಪಟ್ಟಿತು.

ಹಝ್ರತ್ ಸಾಲಿಮ್ ಬಿನ್ ಅಬ್ದುಲ್ಲಾ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಯಾರಾದರೂ ಮೃತರಾದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳುತ್ತಿದ್ದರು, ಅವರನ್ನು ನಮ್ಮ ಬಳಿಯಿಂದ ಮುಂದಾಗಿ ಹೋದವರ ಬಳಿಗೆ ಕಳುಹಿಸಿರಿ. ಉಸ್ಮಾನ್ ಬಿನ್ ಮಝ್‌ಊನ್ ನನ್ನ ಸಮುದಾಯಕ್ಕೆ ಸೇರಿದ್ದ ನಮಗಿಂತ ಮುಂದೆ ಸಾಗಿದ ಎಷ್ಟು ಒಳ್ಳೆಯ ಮನುಷ್ಯರಾಗಿದ್ದರು.

ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್ ನಿಧನ ಹೊಂದಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ಮಯ್ಯತ್ ಸಮೀಪ ಬಂದರು. ಮೂರು ಸಾರಿ ಬಗ್ಗಿದರು. ತಲೆ ಎತ್ತಿ ಉಚ್ಚಸ್ವರದಲ್ಲಿ ಹೇಳಿದರು: ಓ ಅಬೂ ಸಾಯಿಬ್ ಅಲ್ಲಾಹನು ನಿಮ್ಮನ್ನು ಕ್ಷಮಿಸಲಿ. ನೀವು ಲೋಕದಿಂದ ಹೇಗೆ ನಿರ್ಗಮಿಸಿರುವಿರೆಂದರೆ ಲೋಕದ ಯಾವ ವಸ್ತುವಿನಿಂದಲೂ ನೀವು ಮಲೀನರಾಗಲಿಲ್ಲ. ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನರ ಮೃತ ಶರೀರವನ್ನು ಚುಂಬಿಸಿದರು. ಆಗ ಅವರ ಎರಡು ಕಣ್ಣುಗಳಿಂದಲೂ ಅಶ್ರುಧಾರೆ ಸುರಿದು ಹಝ್ರತ್ ಉಸ್ಮಾನ್‌ರ ಕೆನ್ನೆಗಳ ಮೇಲೆ ಹರಿಯುತ್ತಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪುತ್ರ ಇಬ್ರಾಹೀಮ್ ಮೃತನಾದಾಗ ಅವರು ಹೇಳಿದರು, **ಅಲ್‌ಹಿಖ್ ಬಿ ಸಲ್‌ಫಿಸ್ಸಾಲಿಹ್ ಉಸ್ಮಾನ್ ಇಬ್ನು ಮಝ್‌ಊನ್.** ನಮ್ಮಿಂದ ಮುಂದೆ ಸಾಗಿದ ಸಾತ್ವಿಕನಾದ ಉಸ್ಮಾನ್ ಬಿನ್ ಮಝ್‌ಊನ್ ಜೊತೆಗೆ ಸೇರಿಕೊಳ್ಳು. ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ಸಲ್ಲಮರು ಹಝ್ರತ್ ಉಸ್ಮಾನ್ ಬಿನ್ ಮಝ್‌ಊನರ ಜನಾಝ ನಮಾಝ್ ನಿರ್ವಹಿಸಿದರು. ಅದರಲ್ಲಿ ನಾಲ್ಕು ಸಾರಿ ತಕ್‌ಬೀರ್ ಉಚ್ಚರಿಸಿದರು.

ಹಝ್ರತ್ ಉಸ್ಮಾನ್ ಬಿನ್ ಮಝ್ಊನ್ ನಿಧನ ಹೊಂದಿದಾಗ ಅವರ ಜನಾಝವನ್ನು ಹೊತ್ತುಕೊಂಡು ಹೋಗಿ ದಫನ್ ಮಾಡಲಾಯಿತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬನೊಂದಿಗೆ ಒಂದು ಕಲ್ಲನ್ನು ತರಲು ಹೇಳಿದರು. ಆ ವ್ಯಕ್ತಿಗೆ ಆ ಕಲ್ಲನ್ನು ಎತ್ತಲಾಗಲಿಲ್ಲ ಅದು ಬಹಳ ಭಾರವಾಗಿತ್ತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಿಗೆ ಹೋಗಿ ತನ್ನ ಎರಡು ತೋಳುಗಳಿಂದಲೂ ಬಟ್ಟೆಯನ್ನು ಹಿಂದೆ ಸರಿಸಿ ಆ ಕಲ್ಲನ್ನು ಎತ್ತಿಕೊಂಡು ತಂದು ಗೋರಿಯ ತಲೆ ಭಾಗದಲ್ಲಿ ಇರಿಸಿದರು. ಅವರು ಹೇಳಿದರು: ನಾನು ಈ ಕಲ್ಲಿನ ಮೂಲಕ ನನ್ನ ಸಹೋದರನ ಗೋರಿಯನ್ನು ಗುರುತಿಸುವೆನು. ನನ್ನ ಕುಟುಂಬದವರಲ್ಲಿ ಯಾರಾದರೂ ಮೃತರಾದರೆ ಈ ಗೋರಿಯ ಸಮೀಪ ದಫನು ಗೊಳಿಸುವೆನು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರು ಹಝ್ರತ್ ಉಸ್ಮಾನ್ ಬಿನ್ ಮಝ್ಊನರ ಬಗ್ಗೆ ಬರೆದ ಮಾಹಿತಿಗಳಲ್ಲಿ ಕೆಲವನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ಬರೆಯುತ್ತಾರೆ: ಹಿಜರಿ ವರ್ಷ 2ರ ಕೊನೆಯ ಭಾಗದಲ್ಲಿ ತನ್ನ ಸಹಾಬರಿಗೆ ಒಂದು ಖಬರಸ್ಥಾನವನ್ನು ಮದೀನದಲ್ಲಿ ಸ್ಥಾಪಿಸುವ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ನಿರ್ಧರಿಸಿದರು. ಆ ಖಬರಸ್ಥಾನದ ಹೆಸರು ಜನ್ನತುಲ್ ಬಖೀಅ್. ಸಹಾಬರನ್ನು ಇದೇ ಖಬರಸ್ಥಾನದಲ್ಲಿ ದಫನು ಮಾಡಲಾಗುತ್ತಿತ್ತು. ಈ ಖಬರಸ್ಥಾನದಲ್ಲಿ ದಫನುಗೊಳಿಸಲ್ಪಟ್ಟ ಪ್ರಥಮ ಸಹಾಬಿ ಹಝ್ರತ್ ಉಸ್ಮಾನ್ ಬಿನ್ ಮಝ್ಊನ್ ಆಗಿದ್ದರು. ಹಝ್ರತ್ ಉಸ್ಮಾನ್ ಆರಂಭದಲ್ಲಿಯೇ ಮುಸ್ಲಿಮರಾದ ಸಾತ್ವಿಕರೂ ಬಹಳ ಆರಾಧನೆ ಮಾಡುವವರೂ ಆಗಿದ್ದರು. ಅವರು ಸೂಫೀ ಮನೋಭಾವದವರಾಗಿದ್ದರು. ಅವರು ಮುಸ್ಲಿಮರಾದ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಅನುಮತಿ ಬೇಡಿಕೊಂಡು ಹೇಳಿದರು, ನಾನು ಲೌಕಿಕವಾದ ಎಲ್ಲವನ್ನೂ ತ್ಯಜಿಸಲು, ಪತ್ನಿ ಮಕ್ಕಳಿಂದ ದೂರ ಸರಿಯಲು, ನನ್ನ ಜೀವಿತವನ್ನು ಅಲ್ಲಾಹನ ಆರಾಧನೆಯಲ್ಲಿ ಮಾತ್ರ ಕಳೆಯಲು ನನಗೆ ಅನುಮತಿ ನೀಡಿರಿ. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರಿಗೆ ಅದರ ಅನುಮತಿ ನೀಡಲಿಲ್ಲ. ಹಝ್ರತ್ ಉಸ್ಮಾನ್ ಬಿನ್ ಮಝ್ಊನ್ ಮೃತರಾದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಬಹಳ ದುಃಖವಾಯಿತು. ಹೀಗೆ ವರದಿಯಾಗಿದೆ: ಹಝ್ರತ್ ಉಸ್ಮಾನ್ ಮೃತರಾದಾಗ ಅವರ ಹಣೆಯನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಚುಂಬಿಸಿದರು. ಆಗ ಅವರ ಕಣ್ಣುಗಳು ಕಣ್ಣೀರಿನಿಂದ ತುಂಬಿದ್ದುವು. ದಫನು ಗೊಳಿಸಿದ ನಂತರ ಒಂದು ಕಲ್ಲನ್ನು ಗುರುತಿಗಾಗಿ ಇರಿಸಲಾಯಿತು. ಅವರು ಜನ್ನತುಲ್ ಬಖೀಅ್‌ಗೆ ಹೋಗಿ ಮೃತರಿಗೋಸ್ಕರ ಪ್ರಾರ್ಥಿಸುತ್ತಿದ್ದರು. ಹಝ್ರತ್ ಉಸ್ಮಾನ್ ಬಿನ್ ಮಝ್ಊನ್ ಮದೀನದಲ್ಲಿ ದಫನು ಗೊಳಿಸಲ್ಪಟ್ಟ ಪ್ರಥಮ ಮುಹಾಜಿರ್ ಆಗಿದ್ದರು.

ಹಝ್ರತ್ ಉಸ್ಮಾನ್ ಬಿನ್ ಮಝ್ಊನ್ ನಿಧನ ಹೊಂದಿದಾಗ ಅವರ ಪತ್ನಿ ಒಂದು ಶೋಕ ಗೀತೆ ರಚಿಸಿದ್ದರು. ಅದರ ಭಾಷಾಂತರ ಹೀಗಿದೆ: ಓ ನನ್ನ ಕಣ್ಣು, ಉಸ್ಮಾನ್ ನಿಧನ ಹೊಂದಿದ ಬಗ್ಗೆ ನೀನು ಕಣ್ಣೀರು ಸುರಿಸುವುದನ್ನು ನಿಲ್ಲಿಸದಿರು. ತನ್ನ ಸೃಷ್ಟಿಕರ್ತನನ್ನು ಸಂಪ್ರೀತಿ ಗಳಿಸಲು ಆರಾಧಿಸುತ್ತಾ ರಾತ್ರಿಯನ್ನು ಕಳೆಯುತ್ತಿದ್ದವನಿಗೆ ಶುಭವಾರ್ತೆ ದೊರಕಲಿ – ಒಬ್ಬ ಅದ್ವಿತೀಯ ವ್ಯಕ್ತಿ ದಫನು ಗೊಳಿಸಲ್ಪಟ್ಟನು ಎಂದು. ಬಖೀಅ್ ಮತ್ತು ಗರ್ಖದ್ ಈ ನಿವಾಸಿಯ ಕಾರಣದಿಂದ ಪರಿಶುದ್ಧಗೊಂಡವು. ಅವರು ದಫನುಗೊಳಿಸಲ್ಪಟ್ಟ ನಂತರ ಈ ಖಬರಸ್ಥಾನ ಪ್ರಕಾಶಮಾನವಾಯಿತು. ಅವರ ನಿಧನದಿಂದ ಹೃದಯಕ್ಕೆ ಎಷ್ಟು ನೋವುಂಟಾಗಿದೆ ಎಂದರೆ ನಾನು ಮೃತಳಾಗುವ ತನಕ ಅದು ಕೊನೆಗೊಳ್ಳದು. ನನ್ನ ಈ ಸ್ಥಿತಿ ಎಂದೂ ಬದಲಾವಣೆಗೊಳ್ಳಲಾರದು.

ಹಝ್ರತ್ ಉಮ್ಮು ಅಲಾ ಹೇಳುತ್ತಾರೆ: ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಹೀಗೆ ಹೇಳಿದೆ: ಓ ಅಬೂ ಸಾಯಿಬ್ ನಿಮ್ಮ ಮೇಲೆ ಅಲ್ಲಾಹನ ಕಾರುಣ್ಯ ಸುರಿಯಲಿ. ಅಲ್ಲಾಹನು ನಿಮಗೆ ಖಂಡಿತವಾಗಿ ಗೌರವ ದಯಪಾಲಿಸಿದ್ದಾನೆ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಉಸ್ಮಾನ್ ಈಗ ಮೃತರಾಗಿದ್ದಾರೆ. ಅವರಿಗೆ ಅಲ್ಲಾಹನು ನಿಶ್ಚಯವಾಗಿಯೂ ಗೌರವ ನೀಡುವನೆಂದು ನಾನು ಪ್ರತೀಕ್ಷಿಸುತ್ತೇನೆ. ಆದರೆ ಅಲ್ಲಾಹನಾಣೆ! ಉಸ್ಮಾನ್ ಜೊತೆಗೆ ಹೇಗೆ ವರ್ತಿಸಲಾಗುವುದೆಂದು ನನಗೆ ತಿಳಿದಿಲ್ಲ. ಆದರೆ ನಾನು ನಿಶ್ಚಯವಾಗಿಯೂ ಪ್ರಾರ್ಥಿಸುವೆನು. ಆದರೆ ಅವರಿಗೆ ಗೌರವ ನಿಶ್ಚಯವಾಗಿಯೂ ದೊರೆತಿದೆಯೋ ಎಂದು ಅಲ್ಲಾಹನ ರಸೂಲನಾದ ನನಗೆ ಸಹ ತಿಳಿದಿಲ್ಲ. ಹಝ್ರತರ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ಮಾತಿನ ಮೂಲಕ ನೀಡಿದ ತರಬೇತಿ ಏನೆಂದರೆ, ಅಲ್ಲಾಹನು ಕ್ಷಮೆ ನೀಡಿರುವನು ಎಂದು ದೃಢವಾಗಿ ಸಾಕ್ಷ್ಯ ಹೇಳಲು ಸಾಧ್ಯವಿಲ್ಲ ಎಂದು.

ಅನಂತರ ಒಂದು ಸ್ವಪ್ನದ ಮೂಲಕ ಹಝ್ರತ್ ಉಮ್ಮು ಅಲಾರವರಿಗೆ, ಹಝ್ರತ್ ಉಸ್ಮಾನ್ ಬಿನ್ ಮಝ್ಊನರ ಸತ್ಕರ್ಮಗಳನ್ನು ಒಂದು ನೀರಿನ ಒರತೆಯ ರೂಪದಲ್ಲಿ ತೋರಿಸಲಾಯಿತು. ಈ ಸ್ವಪ್ನದ ಕಾರಣ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಮ್ಮು ಅಲಾರವರ ಮಾತನ್ನು ಅಂಗೀಕರಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿದಿತ್ತು, ಬದರೀ ಸಹಾಬರ ಬಗ್ಗೆ ಅಲ್ಲಾಹನು ಸಂತೃಪ್ತನಾಗಿರುವನು ಎಂದು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಆ ಸಹಾಬರ ಬಗ್ಗೆ ಪ್ರಾರ್ಥಿಸಿದ್ದರು. ಸಹಾಬರ ಬಗ್ಗೆ ಅವರು ಪ್ರಕಟಿಸಿದ ಅಭಿಪ್ರಾಯಗಳು ಸ್ಪಷ್ಟಗೊಳಿಸುವುದೇನೆಂದರೆ ಅವರಿಗೆ ತಮ್ಮ ಸಹಾಬರು ತಮ್ಮ ಪ್ರಾರ್ಥನೆಗಳ ಫಲವಾಗಿ ಅಲ್ಲಾಹನ ಸಾಮೀಪ್ಯ ಗಳಿಸುವರು ಎಂದು ತಿಳಿದಿತ್ತು. ಹೀಗಿದ್ದರೂ ಅವರು ಹೇಳಿದರು: ನೀವು ಯಾರ ಬಗ್ಗೆಯೂ ಸಾಕ್ಷ್ಯ ಹೇಳಲು ಸಾಧ್ಯವಿಲ್ಲ ಎಂದು.

ಮುಸ್ನದ್ ಅಹ್ಮದ್ ಬಿನ್ ಹಂಬಲ್ ಎಂಬ ಹದೀಸು ಗ್ರಂಥದಲ್ಲಿ ಈ ವಿಷಯ ಹೀಗೆ ವಿವರಿಸಲಾಗಿದೆ: ಖಾರಿಜ ಬಿನ್ ಝೈದ್ ತನ್ನ ತಾಯಿಯಿಂದ ತಿಳಿದು ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್ ಬಿನ್ ಮಝ್ಊನ್ ಮೃತರಾದಾಗ ಖಾರಿಜ ಬಿನ್ ಝೈದ್‌ರ ತಾಯಿ ಹೇಳಿದರು: ಅಬೂ ಸಾಯಿಬ್ ನೀವು ಪರಿಶುದ್ಧರಾಗಿದ್ದೀರಿ. ನಿಮ್ಮ ಒಳ್ಳೆಯ

ದಿನಗಳು ಬಹಳ ಒಳ್ಳೆಯದಾಗಿದ್ದುವು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಮಾತುಗಳನ್ನು ಆಲಿಸಿ, ನೀವು ಯಾರು? ಎಂದು ಕೇಳಿದರು. ಆಕೆ ಹೇಳಿದರು: ನಾನು ಇಂತಹವಳು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿಮಗೆ ತಿಳಿಸಿದುದು ಯಾರು? ನಾನು ಹೇಳಿದೆ: ಅಲ್ಲಾಹನ ರಸೂಲರೇ, ಉಸ್ಮಾನ್ ಬಿನ್ ಮಝ್ಊನರ ಕರ್ಮಗಳು ಮತ್ತು ಆರಾಧನೆಗಳು ಹೇಗಿದ್ದುವು ಎಂದರೆ ಅವುಗಳೇ ನನಗೆ ಪ್ರಕಟಿಸುತ್ತಿವೆ ಖಂಡಿತವಾಗಿಯೂ ಅಲ್ಲಾಹನು ಅವರೊಂದಿಗೆ ಮಗ್ಫಿರತ್‌ನೊಂದಿಗೆ ವರ್ತಿಸುವನೆಂದು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಉಸ್ಮಾನ್ ಬಿನ್ ಮಝ್ಊನ್‌ರಲ್ಲಿ ನಾವು ಒಳಿತನ್ನು ಹೊರತು ಬೇರೇನನ್ನೂ ಕಾಣಲಿಲ್ಲ. ಆದರೆ ನೀವು ನೆನಪಿಡಿರಿ, ನಾನು ಅಲ್ಲಾಹನ ರಸೂಲ್ ಆಗಿರುವೆನು. ಆದರೆ ಅಲ್ಲಾಹನಾಣೆ ನನಗೆ ತಿಳಿದಿಲ್ಲ ಅಲ್ಲಾಹನು ನನ್ನೊಂದಿಗೆ ಹೇಗೆ ವರ್ತಿಸುವನೆಂದು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಮಿಗಿಲಾಗಿ ಅಲ್ಲಾಹನ ಆರಾಧನೆ ಮಾಡುವವರು ಬೇರೆ ಯಾರೂ ಇರಲಿಲ್ಲ. ಅವರು ಅಲ್ಲಾಹನ ಹಬೀಬರಾಗಿದ್ದರು. ಆದರೆ ಅಲ್ಲಾಹನ ನಿರಾವಲಂಬತೆ ಬಗ್ಗೆ ತಿಳಿದು ಮತ್ತು ಅವನ ಬಗ್ಗೆ ಭಯಭೀತಿ ಎಷ್ಟು ಹೊಂದಿದ್ದರೆಂದರೆ ಅವರು ತಮ್ಮ ಬಗ್ಗೆ ಹೇಳಿದರು: ನನ್ನೊಂದಿಗೆ ಅಲ್ಲಾಹನು ಹೇಗೆ ವರ್ತಿಸುವನೆಂದು ನನಗೆ ತಿಳಿಯದು ಎಂದು. ಇದು ನಾವು ಭಯಪಡಬೇಕಾದ ವಿಷಯವಾಗಿದೆ. ನಾವು ಸತ್ಕರ್ಮಗಳನ್ನು ಮಾಡುವ ಬಗ್ಗೆ, ಅಲ್ಲಾಹನನ್ನು ಆರಾಧಿಸುವ ಬಗ್ಗೆ, ಲಕ್ಷ್ಯ ನೀಡುವ ಬಗ್ಗೆ ನಾವು ಎಷ್ಟು ಚಿಂತಿಸಬೇಕೆಂದು ಸ್ಪಷ್ಟವಾಗುತ್ತದೆ. ನಾವು ಯಾವಾಗಲೂ ವಿನಯದಿಂದ ಮುಂದೆ ಸಾಗಬೇಕು. ನಾವು ಸದಾಕಾಲ ಅಲ್ಲಾಹನ ಕರುಣೆ ಮತ್ತು ಅನುಗ್ರಹದ ಭಿಕ್ಷೆ ಬೇಡುತ್ತಾ ಇರಬೇಕು. ಅವನು ತನ್ನ ಕರುಣೆ ಮತ್ತು ಅನುಗ್ರಹದಿಂದ ನಮಗೆ ಕ್ಷಮೆಯನ್ನು ದಯಪಾಲಿಸಲಿ.

ನಾನು ಪ್ರಸ್ತಾಪಿಸಲಿರುವ ಇನ್ನೊಬ್ಬ ಸಹಾಬಿ ಹಝ್ರತ್ ವಹಬ್ ಬಿನ್ ಸಅದ್ ಬಿನ್ ಅಬೀ ಸರ್‌ಹ್(ರ). ಅವರು ಬನೂ ಆಮಿರ್ ಬಿನ್ ಲೂಯಿ ಗೋತ್ರಕ್ಕೆ ಸೇರಿದವರಾಗಿದ್ದರು. ಅವರ ಸಹೋದರ ಅಬ್ದುಲ್ಲ ಬಿನ್ ಸಅದ್ ಬಿನ್ ಅಬೀ ಸರ್‌ಹ್ ವಹೀ ಬರಹಗಾರನಾಗಿದ್ದು ಅನಂತರ ಇಸ್ಲಾಮ್ ಧರ್ಮ ತ್ಯಾಗ ಮಾಡಿದವನಾಗಿದ್ದನು. ಅವನ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಬರೆದಿದ್ದಾರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನಿಂದ ಸಂದೇಶವಾಣಿ ಅವತೀರ್ಣವಾದಾಗಲೆಲ್ಲಾ ಅವನನ್ನು ಕರೆದು ಅವನಿಂದ ಬರೆಯಿಸುತ್ತಿದ್ದರು. ಒಂದು ದಿನ ಸೂರತುಲ್ ಮೂಮಿನೀನ್ ಅಧ್ಯಾಯದ 14 ಮತ್ತು 15ನೇ ವಚನ ಬರೆಯಿಸುತ್ತಿದ್ದರು. **ಸುಮ್ಮ ಅನ್‌ಶಅ್‌ನಾಹು ಖಲ್‌ಖನ್ ಆಖರ** ಎಂಬಲ್ಲಿಗೆ ತಲಪಿದಾಗ ಬರಹಗಾರನ ಬಾಯಿಯಿಂದ ಅಚಾನಕವಾಗಿ **ಫತಬಾರಕಲ್ಲಾಹು ಅಹ್‌ಸನುಲ್ ಖಾಲಿಖೀನ್** ಎಂಬ ವಚನ ಉಚ್ಚರಿಸಲ್ಪಟ್ಟಿತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಅಲ್ಲಾಹನು ಇದೇ ಸಂದೇಶವಾಣಿ ಅವತೀರ್ಣ ಗೊಳಿಸಿದ್ದಾನೆ ಅದನ್ನು ಬರೆದುಕೊಳ್ಳು. ಆಗ ಅವನು ಹೀಗೆ ಭಾವಿಸಿದನು: ನನ್ನ ಬಾಯಿಯಿಂದ ಹೊರಟ ಈ ವಚನವನ್ನು ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲ್ಲಾಹನ ಸಂದೇಶವಾಣಿ ಎಂದು ಹೇಳಿ ಬರೆಸಿದ್ದಾರೆ. ಇದೇ ರೀತಿ (ನಊದುಬಿಲ್ಲಾಹ್) ಪವಿತ್ರ ಖುರ್‌ಆನ್ ಸ್ವತಃ ಅವರು ಬರೆಯುಸುತ್ತಿದ್ದಾರೆ. ಅನಂತರ ಅವನು ಮುರ್‌ತದ್ದ್ (ಧರ್ಮತ್ಯಾಗಿ) ಆದನು.

ಆಸಿಮ್ ಬಿನ್ ಉಮರ್ ಹೇಳುತ್ತಾರೆ: ಹಝ್ರತ್ ವಹಬ್ ಮಕ್ಕದಿಂದ ಮದೀನಕ್ಕೆ ಹಿಜ್‌ರತ್ ಮಾಡಿದಾಗ ಅವರು ಹಝ್ರತ್ ಕುಲ್‌ಸೂಮ್ ಬಿನ್ ಹದಮ್‌ರ ಮನೆಯಲ್ಲಿ ವಾಸಿಸಿದರು. ಹಝ್ರತ್ ವಹಬ್ ಮತ್ತು ಹಝ್ರತ್ ಸುವೈದ್ ಬಿನ್ ಅಮರ್ ಮಧ್ಯೆ ಸಹೋದರ ಸಂಬಂಧ ಸ್ಥಾಪಿಸಲಾಗಿತ್ತು. ಅವರಿಬ್ಬರೂ ಮೌತ ಯುದ್ಧದಲ್ಲಿ ಶಹೀದರಾದರು. ಹಝ್ರತ್ ವಹಬ್ ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿಯೂ ಹುದೈಬಿಯಾ ಸಂಧಿಯಲ್ಲೂ ಭಾಗವಹಿಸಿದ್ದರು. ಖೈಬರ್ ಯುದ್ಧದಲ್ಲಿಯೂ ಭಾಗವಹಿಸಿದ್ದರು. ಅವರು ಶಹೀದರಾಗುವಾಗ ಅವರ ಪ್ರಾಯ 40 ಆಗಿತ್ತು. ಮೌತ ಯುದ್ಧ ಹಿಜರಿ ವರ್ಷ 8 ಜಮಾದಿಲ್ ಅವ್ವಲ್‌ನಲ್ಲಿ ನಡೆಯಿತು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಹಾರಿಸ್ ಬಿನ್ ಉಮೈರ್‌ರನ್ನು ತನ್ನ ದೂತನನ್ನಾಗಿ ಮಾಡಿ ಬಸ್ರದ ದೊರೆಗೆ ಒಂದು ಪತ್ರವನ್ನು ಕಳುಹಿಸಿದ್ದರು. ಅವರು ಮೌತ ಎಂಬ ಸ್ಥಳಕ್ಕೆ ತಲಪಿದಾಗ ಶರ್‌ಜೀಲ್ ಬಿನ್ ಅಮರ್ ಗಸ್ಸಾನಿ ಅವರನ್ನು ತಡೆದು ಶಹೀದರನ್ನಾಗಿ ಮಾಡಿದನು. ಈ ಘಟನೆಯ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ತಿಳಿದಾಗ ಅವರಿಗೆ ಆ ದುರ್ಘಟನೆ ಬಗ್ಗೆ ಬಹಳ ಸಂತಾಪವಾಯಿತು. ಅವರು ಜನರನ್ನು ಯುದ್ಧಕ್ಕೋಸ್ಕರ ಜಮಾಯಿಸಿದರು. ಅವರ ಸಂಖ್ಯೆ ಮೂರು ಸಾವಿರವಾಗಿತ್ತು. ಅವರೆಲ್ಲರ ನೇತೃತ್ವ ಹಝ್ರತ್ ಝೈದ್ ಬಿನ್ ಹಾರಿಸ ವಹಿಸುವರೆಂದು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು. ಒಂದು ಬಿಳಿ ಧ್ವಜ ತಯಾರಿಸಿ ಹಝ್ರತ್ ಝೈದರಿಗೆ ಕೊಟ್ಟು ಹೀಗೆ ಉಪದೇಶಿಸಿದರು: ಹಝ್ರತ್ ಹಾರಿಸ್ ಬಿನ್ ಉಮೈರ್ ಎಲ್ಲಿ ಶಹೀದರಾದರೋ ಅಲ್ಲಿಗೆ ಹೋಗಿ ಜನರಿಗೆ ಇಸ್ಲಾಮ್ ಧರ್ಮದ ಆಹ್ವಾನ ನೀಡಿರಿ. ಅವರು ಆಹ್ವಾನ ಅಂಗೀಕರಿಸಿದರೆ ಒಳ್ಳೆಯದೇ ಆಗಿದೆ. ಅಂಗೀಕರಿಸದಿದ್ದರೆ ಅವರ ವಿರುದ್ಧ ಅಲ್ಲಾಹನಿಂದ ನೆರವು ಬೇಡಿಕೊಂಡು ಅವರ ವಿರುದ್ಧ ಹೋರಾಡಿರಿ. ಹಝ್ರತ್ ವಹಬ್ ಸಹ ಆ ಯುದ್ಧದಲ್ಲಿ ಭಾಗವಹಿಸಿದ್ದರು.

ಇನ್ನು ನಾನು ಕೆಲವು ಮೃತರ ಬಗ್ಗೆ ವಿವರಿಸುವೆನು. ಅವರ ಜನಾಝು ನಮಾಝ್ ಸಹ ನಿರ್ವಹಿಸುವೆನು. ಮೊದಲನೆಯದಾಗಿ ಮುಕರ್‍ರಮ್ ಮಲಿಕ್ ಮುಹಮ್ಮದ್ ಅಕ್‌ರಮ್ ಸಾಹಿಬರ ಬಗ್ಗೆ ಹೇಳುವೆನು. ಅವರು ಮುಬಲ್ಲಿಗರಾಗಿದ್ದರು. ನಿನ್ನೆ ಎಪ್ರಿಲ್ 25ರಂದು ಮ್ಯಾಂಚೆಸ್ಟರ್‌ನಲ್ಲಿ ಅವರು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅತಾಉಲ್ ಮುಜೀಬ್ ರಾಶಿದ್ ಸಾಹಿಬರು ಹೇಳುತ್ತಾರೆ: ಅಕ್‌ರಮ್ ಸಾಹಿಬರು ಸದ್ಗುಣ ಸಂಪನ್ನರೂ ಅನೇಕ ಒಳಿತುಗಳ ಒಡೆಯರೂ ಆಗಿದ್ದರು. ಅವರು ಬಹಳ ಒಳ್ಳೆಯವರೂ ಪ್ರಾಮಾಣಿಕರೂ ನಿಷ್ಠಾವಂತರೂ ಅರ್ಪಣೆ ಮನೋಭಾವದ ಅಹ್ಮದಿಯೂ

ಆಗಿದ್ದರು. ಉತ್ಸಾಹಭರಿತ ಮುಬಲ್ಲಿಗರೂ ತನ್ನ ಹೊಣೆಗಾರಿಕೆ ನಿರ್ವಹಿಸುವವರೂ ಆಗಿದ್ದರು. ಖಿಲಾಫತ್‌ನ ಅನುಸರಣೆಯಲ್ಲಿ ಉನ್ನತ ಸ್ಥಾನ ಪಡೆದವರೂ ಅತ್ಯಂತ ಸೇವಾ ಮನೋಭಾವದವರೂ ಆಗಿದ್ದರು.

ಎರಡನೆಯ ಜನಾಝ ಮುಕರ್ರಮ್ ಚೌಧುರಿ ಅಬ್ದುಶ್ಶುಕೂರ್ ಮುಬಲ್ಲಿಗ್ ಸಾಹಿಬರದಾಗಿದೆ. ಅವರು ಚೌಧುರಿ ಅಬ್ದುಲ್ ಅಝೀಝ್ ಸಾಹಿಬ್ ಸಿಯಾಲ್‌ಕೋಟಿಯವರ ಪುತ್ರನಾಗಿದ್ದರು. ಎಪ್ರಿಲ್ ದಿನಾಂಕ 12ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಪಾಕಿಸ್ಥಾನದ ಖಾಯಿದ್ ಉಮೂಮೀ ಅನ್ಸಾರುಲ್ಲಾ ಮಹ್ಮೂದ್ ತಾಹಿರ್ ಸಾಹಿಬ್ ಹೇಳುತ್ತಾರೆ: ಮೃತರು ಬಹಳ ಮೌನವಾಗಿ ಸೇವೆ ಸಲ್ಲಿಸುವವರಾಗಿದ್ದರು. ಕೃತ್ಯನಿಷ್ಠರೂ ವಿಚಾರಶೀಲರೂ ಆಗಿದ್ದರು. ನಾಯಿಬ್ ವಕೀಲುತ್ತಬ್‌ಶೀರ್ ಶೇಖ್ ಖಾಲಿದ್ ಸಾಹಿಬ್ ಹೇಳುತ್ತಾರೆ: ಅವರು ಬಹಳ ಸೌಮ್ಯ ಸ್ವಭಾವದವರೂ ಘನತೆಯುಳ್ಳವರೂ ಸೂಕ್ಷ್ಮ ಮನೋಭಾವದವರೂ ಆಗಿದ್ದರು. ಅವರು ಖಿಲಾಫತ್ ಮತ್ತು ಜಮಾಅತ್‌ಗೆ ಅತ್ಯಂತ ನಿಷ್ಠಾವಂತರಾಗಿದ್ದರು.

ಮೂರನೆಯ ಜನಾಝ ಮುಕರ್ರಮ್ ಮುಹಮ್ಮದ್ ಸಾಲಿಹ್ ಸಾಹಿಬ್ ಮುಅಲ್ಲಿಮ್ ವಕ್ಫ್ ಜದೀದ್ ಅವರದಾಗಿದೆ. ಎಪ್ರಿಲ್ 21ರಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರ ಮುತ್ತಜ್ಜ ಮಲಿಕ್ ಅಲ್ಲಾ ಬಕ್ಷ್ ಸಾಹಿಬ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ ಆಗಿದ್ದರು. ಅವರು ಸೂರ್ಯ ಚಂದ್ರ ಗ್ರಹಣಗಳ ದೃಷ್ಟಾಂತವನ್ನು ಕಂಡು ಲೂದ್ರಾಂನಿಂದ ಕಾಲು ನಡೆಯಾಗಿ ಖಾದಿಯಾನಿಗೆ ಹೋಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹಸ್ತದಲ್ಲಿ ಬೈಅತ್ ಮಾಡಿದ್ದರು.

ನಾಲ್ಕನೆಯ ಜನಾಝ ಮುಕರ್ರಮ್ ಮುವೇಶೆ ಜುಮಅ ಸಾಹಿಬ್ ತೆನ್‌ಝಾನಿಯಾ ಅವರದಾಗಿದೆ. ಅವರು ಮಾರ್ಚ್ 13ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ಖಿಲಾಫತ್ ಬಗ್ಗೆ ಅತ್ಯಂತ ಪ್ರೀತಿವುಳ್ಳವರೂ ಮುಬಲ್ಲಿಗರಿಗೂ ಜಮಾಅತಿನ ಹುದ್ದೇದಾರರಿಗೂ ಬಹಳ ಗೌರವ ನೀಡುವವರೂ ಜಮಾಅತಿನ ನಿಝಾಮನ್ನು ಅನುಸರಿಸುವವರೂ ಆಗಿದ್ದರು. ಅವರಿಗೆ ತಬ್ಲೀಗ್ ಬಗ್ಗೆ ಬಹಳ ಆಸಕ್ತಿಯಿತ್ತು. ಚಂದ ಕೊಡುವುದರಲ್ಲಿ ಪ್ರಥಮ ಸ್ಥಾನ ಪಡೆದವರಲ್ಲಿ ಒಬ್ಬರಾಗಿದ್ದರು. ಅಲ್ಲಾಹನು ಅವರೆಲ್ಲರೊಂದಿಗೂ ರಹ್ಮತ್ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಿ ಅವರ ಪದವಿಗಳನ್ನು ಉನ್ನತಗೊಳಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis****(atba)*

*At,Masjid Baithul Futhuh London, UK. On 26-04-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon